ಸೃಜನಿ

**SRUJANI: Indian Journal of Innovative Research and Development (SIJIRD)**
Volume-2 Issue 4, September-October 2023, Pp. 65-69
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಮನುಷ್ಯನ ಪ್ರಾಕೃತಿಕ ಬದುಕಿನ ಹೋರಾಟ: ಯು. ಆರ್. ಅನಂತಮೂರ್ತಿ ಅವರ 'ಪ್ರಕೃತಿ' ಕಥೆಯ ಅವಲೋಕನ

**ಡಾ. ಎಚ್. ಬಿ. ಕೋಲ್ಕಾರ**
ಮುಖ್ಯಸ್ಥರು, ಕನ್ನಡ ವಿಭಾಗ, ಆರ್.ಪಿ.ಡಿ ಕಾಲೇಜು, ಬೆಳಗಾವಿ.

**Abstract:**

*ಕನ್ನಡದ ಪ್ರಮುಖ ನವ್ಯ ಲೇಖಕರಾದ ಡಾ. ಯು. ಆರ್. ಅನಂತಮೂರ್ತಿಯವರದು ಅನನ್ಯ ಸೃಜನಶೀಲ ಪ್ರತಿಭೆ. ಸಹ್ಯಾದ್ರಿಯ ದಟ್ಟ ಮಡಿಲಿನ ನೀರವ, ರೌದ್ರವ, ಶಾಂತ, ಪ್ರಕ್ಷುಬ್ಧ, ಭಯಂಕರ, ಅಗಮ್ಯ, ಅದ್ಭುತ ರೂಪದ ಸಹಜ ಮತ್ತು ಅಸಹಜ ಬದುಕಿನ ವಾಸ್ತವ ಚಿತ್ರಣಗಳು ಅವರ ನವನವೋನ್ಮೇಷಶಾಲಿನಿ ಪ್ರತಿಭೆಯಲ್ಲಿ ದೃಶ್ಯ ರೂಪ ತಾಳಿ ಮರಳಿ–ಅರಳಿ ರೂಪಕಗಳಾಗಿ ನಿಲ್ಲುತ್ತವೆ. ಪರಂಪರೆಯ ಜೀವನ ಮೌಲ್ಯಗಳನ್ನು ಆಯಾ ಕಾಲ, ಸಂದರ್ಭಗಳ ಸ್ಥಿತಿಯಲ್ಲಿ ನಿಂತು ವೈಚಾರಿಕ ನೆಲೆಯಲ್ಲಿ ಬಾಳಿಗೆ ಅವುಗಳ ಅನ್ವಯವನ್ನು ಕುರಿತು ಚಿಂತಿಸುವುದು, ತರ್ಕಿಸುವುದು, ವಾದಿಸುವುದು, ಸಂವಾದಿಸುವುದು ಅವರ ಬರಹದ ಹಿಂದಿರುವ ಅನೇಕ ಕಾಳಜಿಗಳಲ್ಲಿ ಒಂದು. ಇದಕ್ಕೆ ಹಿನ್ನೆಲೆಯಾಗಿ ಅವರು ಗಾಂಧಿವಾದ, ಲೋಹಿಯಾವಾದ ಮೊದಲಾದ ಪ್ರಗತಿವಾದಗಳನ್ನು ಪೂರಕವಾಗಿ ಸಂಯೋಜಿಸಿಕೊಂಡು ಚಿಂತಿಸುವ ಆಯಾಮಗಳನ್ನು ಹೆಣೆಯುತ್ತಾರೆ. ಹೀಗಾಗಿ ಅವರ ಒಟ್ಟೂ ಬರಹ ಅದು ಕಾದಂಬರಿಯಾಗಿರಲಿ, ಕಥೆಯಾಗಿರಲಿ, ವಿಮರ್ಶೆಯಾಗಿರಲಿ, ಚಿಂತನೆಯಾಗಿರಲಿ ಕಾಲಾತೀತ ಜೀವನ ಕ್ರಮ ಮತ್ತು ಮೌಲ್ಯಗಳನ್ನು ಸಮಕಾಲೀನ ಸಂದರ್ಭದ ಸ್ಥಿತಿಗತಿಗಳಲ್ಲಿ ಅದ್ದಿ ಪುನರ್‌ರೂಪಿತಗೊಂಡು ಪ್ರವಹಿಸುವ ಅಥವಾ ಚಲನೆಗೊಳ್ಳುವ ಹೊಸ ಆವಿಷ್ಕಾರ ರೂಪ ಪಡೆದು ನಮ್ಮನ್ನು ಪರಿವರ್ತಿತಗೊಳ್ಳುವಂತೆ ಪ್ರೇರಿಸುತ್ತದೆ. ಒಬ್ಬ ಸೃಜನಶೀಲ ಬರಹಗಾರನಿಗಿರಬೇಕಾದ ನಿಜವಾದ ಶಕ್ತಿಯೇ–ಹೀಗೆ ಬದುಕಿಗೆ ಬದ್ಧನಾಗಿ ಪರಿವರ್ತಿತಗೊಳ್ಳುವಂತೆ ಪ್ರೇರೇಪಿಸುವುದು. ಪ್ರಸ್ತುತ ಲೇಖನದಲ್ಲಿ ಯು.ಆರ್.ಅನಂತಮೂರ್ತಿಯವರ 'ಪ್ರಕೃತಿ' ಕಥೆಯಲ್ಲಿ ವ್ಯಕ್ತವಾಗಿರುವ ಮನುಷ್ಯನ ಪ್ರಾಕೃತಿಕ ಬದುಕಿನ ಹೋರಾಟವನ್ನು ಅವಲೋಕಿಸಲಾಗಿದೆ.*

**Keywords:** *ಕನ್ನಡ ಸಾಹಿತ್ಯ, ಯು.ಆರ್.ಅನಂತಮೂರ್ತಿ, ಪ್ರಕೃತಿ, ಪ್ರಾಕೃತಿಕ ಬದುಕು.*

## ಪೀಠಿಕೆ

ಅನಂತಮೂರ್ತಿಯವರು ಪಾಶ್ಚಾತ್ಯ–ಪೌರ್ವಾತ್ಯ, ಪ್ರಾಚೀನ–ಆಧುನಿಕ, ರಾಷ್ಟ್ರೀಯತೆ–ದೇಶಿಯತೆ, ಆದರ್ಶ–ವಾಸ್ತವ, ಹೀಗೆ ತೆಕ್ಕೆಗೆ ಸಿಕ್ಕ ಎಲ್ಲದರ ಅರಿವನ್ನು ಹದಗೊಳಿಸಿಕೊಂಡು ಬಂದ ರೀತಿಯಲ್ಲಿ ಕನ್ನಡದಲ್ಲಿ ಸಾಹಿತ್ಯ ಚಿಂತನೆಯನ್ನು ಸೃಷ್ಟಿಸಿದವರು. ಭಿನ್ನ ಭಿನ್ನ ಕಾಲಘಟ್ಟದಲ್ಲಿ ಮೂಡಿಬಂದ ಅವರ 'ಎಂದೆಂದೂ ಮುಗಿಯದ ಕಥೆ', 'ಪ್ರಶ್ನೆ', 'ಮೌನಿ', 'ಆಕಾಶ ಮತ್ತು ಬೆಕ್ಕು', 'ಸೂರ್ಯನ ಕುದುರೆ' ಮುಂತಾದ ಕಥಾ ಸಂಕಲನಗಳು ಆಯಾಕಾಲದ ಕೌಟುಂಬಿಕ, ಸಾಮಾಜಿಕ, ರಾಜಕೀಯ,

***Please cite this article as:*** ಕೋಲ್ಕಾರ, ಎಚ್.ಬಿ. (2023). ಮನುಷ್ಯನ ಪ್ರಾಕೃತಿಕ ಬದುಕಿನ ಹೋರಾಟ: ಯು. ಆರ್. ಅನಂತಮೂರ್ತಿ ಅವರ 'ಪ್ರಕೃತಿ' ಕಥೆಯ ಅವಲೋಕನ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್*, 2(4), 65–69.

ಸಾಂಸ್ಕೃತಿಕ ಸ್ಥಿತ್ಯಂತರಗಳನ್ನು, ಆಗುಹೋಗುಗಳನ್ನು ತಾತ್ವಿಕವಾಗಿ ಗ್ರಹಿಸಿ ಜೀವನವನ್ನು ಪರಿವರ್ತಿಸಿಕೊಳ್ಳುವ, ಸರಿಯಾಗಿ ಸರಿದೂಗಿಸಿಕೊಳ್ಳುವ ಆಶಯಗಳನ್ನು ನಮ್ಮ ಮುಂದೆ ಇಡುತ್ತವೆ.

ಪ್ರಸ್ತುತ 'ಪ್ರಕೃತಿ' ಎಂಬ ಕಥೆಯಲ್ಲಿ ಅನಂತಮೂರ್ತಿಯವರು ಮನುಷ್ಯನ ಪ್ರಾಕೃತಿಕ ಬದುಕು ಹೋರಾಟಮಯವಾದುದು ಎಂಬುದನ್ನು ಸಾಮಾನ್ಯವಾಗಿ ಸಂವೇಂದಿಸಿದರೂ, ದಟ್ಟ ಕಾಡು ಗಿರಿ ಕಂದರಗಳಿಂದಾವೃತವಾದ, ಸಮುದ್ರ ನೆರೆ ತೊರೆ ಪ್ರವಾಹಗಳಿಂದ ಕೂಡಿದ ಜನಬದುಕಿನ ಹೋರಾಟಗಳು ಅತ್ಯಂತ ಭಯಂಕರ ವಾದವುಗಳು, ಅಸಹಜವಾದವುಗಳು. ಇಂಥ ಪ್ರಕೃತಿ ಪರಿಸರದಲ್ಲಿ ಬಾಳುವ, ಬದುಕುವ ಮನುಷ್ಯನ ಪ್ರಕೃತಿಯೂ ಕೂಡ ಕಾಯಾ–ವಾಚಾ–ಮನಸಾ ಅವುಗಳಿಗೆ ಹೊಂದಿಕೊಂಡೇ, ಒಗ್ಗಿಕೊಂಡೇ ಬದುಕಬೇಕಾದ ಸಂದಿಗ್ಧತೆಗಳು, ಒತ್ತಡ–ಪರಿಸ್ಥಿತಿಗಳು ಅನಿವಾರ್ಯವಾಗಿವೆ. ಇಂಥಲ್ಲಿ ಬದುಕಿಗೆ ಪೂರಕವಾಗಿ ಪ್ರಕೃತಿಯ ಕಾಲ–ಮಾನ– ಋತುಗಳು ಕೂಡುತ್ತ ಬಂದರೆ ಸಮಾಧಾನ – ಸುಖ ಸಾಧ್ಯ. ಇಲ್ಲದಿದ್ದರೆ ಗೋಳೇ ಬಾಳು ಆಗುವ ವಿಪರ್ಯಾಸ ಮೇಲಿಂದ ಮೇಲೆ ಇದ್ದೇ ಇರುತ್ತದೆ ಎಂಬುದನ್ನು ವೇದ್ಯವಾಗಿಸಲು ಸಾಂಕೇತಿಕವಾಗಿ ಸಂಕಪ್ಪಯ್ಯ ಹಾಗೂ ಆತನ ಕುಟುಂಬವೊಂದು ಗಿರಿ–ಕಂದರದ ಅಬ್ಬಿಯ ತಡಿಯಲ್ಲಿ ಗದ್ದೆ–ತೋಟ ಮಾಡಿಕೊಂಡು ಹೋರಾಟಮಯ ಬದುಕನ್ನು ಕಳೆಯುತ್ತ ಪರಿತಪಿಸಿದ, ಅನುಭವಿಸಿದ ಕಷ್ಟ ನಷ್ಟ, ಪಟ್ಟ ಪಾಡನ್ನು ತುಂಬಾ ಆಪ್ತ ಭಾವದಲ್ಲಿ ನಿವೇದಿಸುತ್ತ ನಮ್ಮನ್ನು ಅಂತಹ ಬದುಕಿನ ಕುರಿತು ತಪ್ತಭಾವದಲ್ಲಿ ಕಿಂಚಿತ್ತಾದರೂ ಮಾನವೀಯ ನೆಲೆಯಲ್ಲಿ ಕಾಣುವ, ಚಿಂತಿಸುವ ಸಂವೇದನೆಗೆ ಈಡು ಮಾಡುತ್ತಾರೆ.

ಸಂಕಪ್ಪಯ್ಯ 'ಪ್ರಕೃತಿ' ಕಥೆಯ ನಾಯಕ. ಮಲೆನಾಡಿನ ಅರಣ್ಯ ಪ್ರದೇಶದಲ್ಲಿ ಒಂದಷ್ಟು ಗದ್ದೆ – ತೋಟ ಮಾಡಿಕೊಂಡು ಎಲ್ಲರಂತೆ ತನ್ನಷ್ಟಕ್ಕೆ ತಾನು ಹೆಂಡತಿ ಸೀತಮ್ಮ, ಮಗ ನಾರಾಯಣ ಹಾಗೂ ಲಕ್ಷ್ಮೀ, ಶಾಂತ ಎಂಬೆರಡು ಹೆಣ್ಣು ಮಕ್ಕಳೊಂದಿಗಿನ ಸಂಸಾರ ಕಟ್ಟಿಕೊಂಡು ಪ್ರಕೃತಿಯಲ್ಲಿ ಪ್ರಕೃತಿ (ಶರೀರ) ಧರ್ಮಕ್ಕನುಗುಣವಾಗಿ ಏಕಾಂಗಿಯಾಗಿ ಶ್ರದ್ಧೆಯಿಂದ ದುಡಿದು ಬಾಳು ಕಟ್ಟಿದವ. ತನ್ನ ಅವಿಶ್ರಾಂತ ಶ್ರದ್ಧೆ–ದುಡಿಮೆಗಳೇ ಕಾರಣವಾಗಿ ಜಿಲ್ಲಾಧಿಕಾರಿಯಿಂದ ಮಲೆನಾಡಿನ ಅತ್ಯುತ್ತಮ ಬೇಸಾಯಗಾರನೆಂದೂ ಬೆಳ್ಳಿ ಪದಕ ಪಡೆದು ಸ್ವಾಭಿಮಾನ ಮೆರೆದವ.

ಕಾಲ ಸರಿದಂತೆ ಕಾಲಧರ್ಮಕ್ಕನುಗುಣವಾಗಿ ಆತನ ಗದ್ದೆ–ತೋಟದ ಪರಿಸರ, ಪ್ರಕೃತಿ ಪರಿಸರಗಳು ಪಲ್ಲಟಗೊಂಡವು. ಋತು–ಮಾನಗಳಿಗೆ ತಕ್ಕಂತೆ ಬರಗಾಲ ಬೀಳುತ್ತಾ ಆತನ ದುಡಿತಕ್ಕೆ ತಕ್ಕ ಪ್ರತಿಫಲ ದೊರೆಯದೇ ಹೋಯಿತು. ಸ್ವಾಭಿಮಾನಿ ಸಂಕಪ್ಪಯ್ಯ ಮಲೆನಾಡಿನ ಗಿರಿ ಕಂದರದ ಹಾಳು ಇಳಿಜಾರಿನಲ್ಲಿ ಕಿತ್ತಳೆ ತೋಟ ಮಾಡಿಯೇ ತೀರಬೇಕೆಂದು ಹಟ ಹಿಡಿದು ದುಡಿದೇ ದುಡಿದ. ಇದಕ್ಕಾಗಿ ತನ್ನೂರಿನ ಕೃಷ್ಣಭಟ್ಟರ ಹತ್ತಿರ ಸಾಲವನ್ನೂ ಮಾಡಿದ. ಬೆಳೆ ಬಂದೀತೆಂದು ಪ್ರತೀ ಸಂದರ್ಭದ ಅವನ ಆಸೆ ಹುಸಿಯಾಗಿ ಸಾಲ ಇಪ್ಪತ್ತು ಸಾವಿರಕ್ಕೆ ಏರಿತು. ಹೆಂಡತಿಯ ಮೈಮೇಲಿದ್ದ ಅಲ್ಪಸ್ವಲ್ಪ ಬಂಗಾರವನ್ನೂ ಕಳೆದುಕೊಂಡು ಗದ್ದೆಗೆ ಹಾಕಿ ಬೆಳೆಗಾಗಿ ಹಂಬಲಿಸಿ ಶ್ರಮಿಸಿದರೂ ಬೆಳೆ ಬರಲಿಲ್ಲ. ಆಗ ಹೆಂಡತಿ ಮಕ್ಕಳ ಇರುಸು– ಮುರುಸೂ ಆರಂಭವಾಯಿತು. "ಮನೆಯವರ ಸುಖಕ್ಕೆ ಆಗದ ಬೇಸಾಯ ಯಾಕೆ ಮಾಡಬೇಕೋ..." ಎಂದು ಹೆಂಡತಿ ಕಟಕಿಯಾಡಿದಳು. ಈ ಹೋರಾಟದಲ್ಲಿ ಆರು ವರ್ಷ ಕಳೆಯಿತು. ಇಂಥ ಸಂದರ್ಭದಲ್ಲಿ ಹಿರೀ ಮಗಳು ಮದುವೆಯಾಗಿ ಆರು ತಿಂಗಳು ಕಳೆದಿರಲಿಲ್ಲ ಅವಳ ಗಂಡ ತೀರಿ ಹೋಗಿ ಮತ್ತೆ ತನ್ನ ಮನೆ ಸೇರುವಂತಾಯಿತು. ಅಪ್ಪನೊಂದಿಗೆ ಕೂಡಿ ದುಡಿಯದ ಮಗ ನಾರಾಯಣ ಹೇಡಿಯಾದ. ಬದಲಿಗೆ ಆಧುನಿಕ ನಗರ ಬದುಕಿನ ಸಂಸ್ಕೃತಿಗೆ ಮಾರು ಹೋಗಿ ದುಶ್ಚಟಗಳಿಗೆ ಬಲಿಯಾಗಿ ಶೋಕಿ ಜೀವನ ಶೈಲಿಗೆ ವಾಲಿ ಶಿವಮೊಗ್ಗದಲ್ಲಿ ಹೊಟೇಲು

ತೆಗೆಯುತ್ತೇನೆಂದು ಹಠ ಹಿಡಿದು ಹಣ ಬೇಡಿದ. ಕೊಡದಿದ್ದಕ್ಕೆ ಆಸ್ತಿಯ ಹಕ್ಕಿನ ಮಾತನಾಡಿ ತಂದೆಯನ್ನು ಅವಮಾನಿಸಿದ. ನಾಗರಿಕ ಸೌಲಭ್ಯಗಳ ಸಂಪರ್ಕವೇ ಇಲ್ಲದಂತಹ ಮತ್ತು ಆಗಾಗ ಹುಲಿ, ಆನೆ, ಚಿರತೆ ಮೊದಲಾದ ಭಯಂಕರ ಪ್ರಾಣಿಗಳಿಂದ ಅಲ್ಲದೆ ನಿಸರ್ಗ ಋತುಮಾನಗಳಿಂದಾಗುವ ವೈಪರೀತ್ಯದ ಕಾರಣವಾಗಿ ರೋಗ–ರುಜಿನ ಮೊದಲಾದ ತೊಂದರೆಗೊಳಗಾಗಿ ನಿತ್ಯ ತತ್ತರಿಸುತ್ತಿರುವ ಬದುಕಿನ ರೀತಿಗೆ ಹೆಂಡತಿಯೂ ರೋಷಿಹೋಗಿ ಮಗನ ಪರವಾಗಿ ನಿಂತು ಮನೆಬಿಟ್ಟು ಮಕ್ಕಳ ಸಮೇತ ಶಿವಮೊಗ್ಗಕ್ಕೆ ಹೋದಳು. ಸಂದರ್ಭವನ್ನೇ ಬಳಸಿಕೊಂಡು ಸಂಬಂಧಿ ಶಾನುಭೋಗರು ಕುಟುಂಬದ ಸ್ವಾಸ್ತ್ಯವನ್ನು ಒಡೆದರು. ಪತಿ ವಿರಹಿತ ಮಗಳು ಲಕ್ಷ್ಮೀ ಪ್ರಕೃತಿ ಧರ್ಮದ ಸಹಜತೆಗೆ ಸೋತು ಶಾನುಭೋಗರ ಮಗ ಕಿಟ್ಟಣ್ಣನೊಂದಿಗೆ ಮನೆಯವರಿಗೆ ಗೊತ್ತಾಗದಂತೆ ಸರಸವಾಡುತ್ತಾ ನಡೆದಳು. ಚಿಕ್ಕಮಗಳ ಮುಗ್ಧ ಪ್ರೀತಿ ಯಾವ ಸಾಂತ್ವನಕ್ಕೂ ಸಾಲದೇ ವ್ಯರ್ಥವಾಯಿತು. ಈ ಎಲ್ಲ ಅನಿರೀಕ್ಷಿತ ವಿಪರ್ಯಾಸಗಳು ಕಾರಣವಾಗಿ ಸಂಕಪ್ಪಯ್ಯ ಸೋತು ಸುಣ್ಣವಾಗುತ್ತಾನೆ. "ವಂಶಪಾರಂಪರ್ಯವಾಗಿ ಗುಡ್ಡಗಳ ಜೊತೆ ಸೆಣಸಿ ಬೆಳಸಿದ ತೋಟ–ಗದ್ದೆ ಪರಭಾರೆ ಮಾಡುವುದೇ...?" ಎಂದು ಒಳಗೊಳಗೇ ಸಂಕಟ ಪಟ್ಟುಕೊಳ್ಳುತ್ತಾನೆ. ಅಂತೂ ಪ್ರಕೃತಿ ವಿರುದ್ಧದ ತನ್ನ ಸೆಣಸಾಟ ಸರಿಯಾದುದಾಗಲಿಲ್ಲ.! ಎನ್ನುವ ಕಾಲದ ಅರಿವು ಅವನಲ್ಲಿ ಮೂಡುತ್ತದೆ. ಆಗ ಅನ್ಯ ದಾರಿಯಿಲ್ಲದೆ (ಸಾಲಕ್ಕೆ ಪ್ರತಿಯಾಗಿ) ತನ್ನ ಗದ್ದೆ–ತೋಟಗಳನ್ನು ಕೃಷ್ಣ ಭಟ್ಟರಿಗೆ ಮಾರಿಕೊಂಡು ಅಸಹಾಯಕನಾಗಿ ಏಕಾಂಗಿಯಾಗುತ್ತಾನೆ. ಇದಿಷ್ಟು ಕಥೆಯ ಒಡಲು.

ತುಂಬಾ ಆರ್ದ್ರಭಾವದಲ್ಲಿ ಮೂಡಿಬಂದ ಕಥೆಯಿದು. ಜೀವನದ ಕೆಲವು ತಾತ್ವಿಕ ಅರ್ಥಗಳನ್ನು ಮನುಷ್ಯ ತನ್ನ ಇತಿಮಿತಿಯ ಬದುಕಿನಲ್ಲಿ ಸರಿಯಾಗಿ ಗ್ರಹಿಸದೆ, ಅರ್ಥೈಸಿಕೊಳ್ಳದೆ ಹೋದರೆ ಏನು ಮಾಡಿಯೂ ವ್ಯರ್ಥ ಎಂಬುದನ್ನು ವಿವರಿಸುತ್ತದೆ.

ಇಲ್ಲಿನ ಸಂಕಪ್ಪಯ್ಯ ಒಂದಿಷ್ಟು ಪ್ರತಿಷ್ಠೆಯ ಹಠವಾದಿ. ಅವನ ಸ್ವಾವಲಂಬೀ ಶ್ರದ್ಧೆ ನಿಷ್ಠೆ ಧಾರ್ಷ್ಟ್ಯತನಗಳ ಬಗ್ಗೆ ಅವನಿಗೆ ಬಲವಾದ ನಂಬುಗೆ ಇರುವ ಕಾರಣಕ್ಕಾಗಿ ಆತ ತನ್ನ ಮೂಗಿನ ನೇರಕ್ಕೇ ಚಿಂತಿಸುವ ಹಠ ಸಾಧಿಸುತ್ತಾನೆ. ಇದು ಅವನ ಪ್ರಕೃತಿ ಧರ್ಮವಾಗುತ್ತದೆ. ದುಡಿತದಲ್ಲಿ ಪ್ರತಿಫಲ ಇದ್ದೇ ಇದೆ ಎಂದು ನಂಬಿದ ಆತ ಕಾಲ ಧರ್ಮದ ಮತ್ತು ಸಹಜ ನಿಸರ್ಗ ಪ್ರಕೃತಿ ಪರಿಸರದ ಸ್ಥಿತಿ– ಸ್ವರೂಪಗಳ ಹಾಗೂ ಅವುಗಳ ಪರಿವರ್ತನೆ ಪಲ್ಲಟಗಳ ಕಡೆಗೆ, ಮಾರಕ ಪರಿಣಾಮಗಳ ಕಡೆಗೆ ಗಮನ ನೀಡುವುದಿಲ್ಲ. ಹೀಗಾಗಿ ತನ್ನ ದುಡಿಮೆಯ ಬದುಕಿಗೆ ತಕ್ಕ ಪ್ರತಿಫಲ ಸಿಗದೇ ಹೋದಾಗ, ಬದುಕು ದುಸ್ತರವಾದಾಗ ಸಾಲ–ಸೋಲ ಮಾಡಿಯೂ ಪ್ರತಿಫಲಕ್ಕೆ ಹಠ ಸಾಧಿಸಿ ಕುಟುಂಬದ ಸದಸ್ಯರ ಉಪೇಕ್ಷೆಗೆ ಒಳಗಾಗುತ್ತಾನೆ. ಸಂಕಟದಲ್ಲಿ ಸಿಡಿಮಿಡಿಗೊಂಡು ಅವರನ್ನು ಅವರ ಅಪೇಕ್ಷೆಯಂತೆ ದೂರದ ಶಿವಮೊಗ್ಗೆಗೆ ಹೊರದೂಡಿ ತಾನು ಆ ಪರಿಸರದಲ್ಲಿ ಒಂಟಿಯಾಗುತ್ತಾನೆ, ಅನಾಥನಾಗುತ್ತಾನೆ. ಜೀವನಕ್ಕಾಗಿ ಹಂಬಲಿಸುವ ಅವನ ಶರೀರ ಪ್ರಕೃತಿಯು ನಿಸರ್ಗದ ಸಹಜ ಪ್ರಕೃತಿಯ ವ್ಯತಿರಿಕ್ತ ಪರಿಣಾಮಗಳ ಕಾರಣವಾಗಿ ಜೀವ ಪ್ರೀತಿಯನ್ನೇ ಕಳೆದುಕೊಳ್ಳುವ ವಿಪರೀತ ವಿಷಮಯ ಸ್ಥಿತಿಯೊಂದು ಅವನ ಮೂಲಕ ಕಥೆಯಲ್ಲಿ ದೃಶ್ಯ ರೂಪಕವಾಗಿ ಮಡುಗಟ್ಟಿ ನಿಂತಿದೆ.

ಮಾನವ ಪ್ರಕೃತಿ ಧರ್ಮದ ಗುಣವು ಯಾವಾಗಲೂ ಸುಖವನ್ನೇ ಬಯಸುವಂಥದ್ದು. ಕಷ್ಟಪಟ್ಟರೂ ಇಂಥ ಸುಖವೇ ಸಿಕ್ಕದಾಗ ಹೆಂಡತಿಯಾದರೇನು... ಮಕ್ಕಳಾದರೇನು... ಸಂಬಂಧದಿಂದ ದೂರಾಗುವಷ್ಟು ಪ್ರಕೃತಿ ಧರ್ಮ ಎಚ್ಚರಗೊಳ್ಳುತ್ತದೆ. ಇದನ್ನು ಸಂಕಪ್ಪಯ್ಯನ ಹೆಂಡತಿ ಮಕ್ಕಳು ಅವನನ್ನು ಬಿಟ್ಟು ದೂರಾಗಿ ನಗರಕ್ಕೆ ವಲಸೆ ಹೋಗುವ ಘಟನೆಯ ಮೂಲಕ ಸಂವೇದಿಸುತ್ತಾರೆ ಲೇಖಕರು. ಕಥೆಯಲ್ಲಿನ ಸಂಕಪ್ಪಯ್ಯನ ಮಗಳು ಲಕ್ಷ್ಮಿ ಮದುವೆಯಾಗಿ ಕೆಲ ತಿಂಗಳಲ್ಲೇ ಪತಿಯನ್ನು ಕಳೆದುಕೊಂಡು ವಿರಹ ವೇದನೆಯನ್ನು ಸಹಿಸದೆ

ಪ್ರಕೃತಿ ಧರ್ಮದ ವಿರುದ್ಧ ನಿಲ್ಲುವುದು ಯೌವನಕ್ಕೆ ಅಸಾಧ್ಯವಾಗಿ ದೇಹ (ಪ್ರಕೃತಿ) ಧರ್ಮದ ತೃಷೆಯನ್ನು ಅನ್ಯ ಸಂಬಂಧದಿಂದ ಪೂರೈಸಿಕೊಳ್ಳುವ ಸಹಜತೆಯು ಸಂಕಪ್ಪಯ್ಯನಿಗೆ ಅಧರ್ಮವಾಗಿ ಕಾಣುತ್ತದೆ. ಇದರಿಂದ ಆತ ಇನ್ನಷ್ಟು ಜರ್ಜರಿತಗೊಳ್ಳುವುದು, ಆತನ ಕಾಲಲ್ಲಿನ ಶಕ್ತಿಯೇ ಉಡುಗಿಹೋಗಿ "ದಾರಿ ತಪ್ಪಿದೆ"ನೆಂದುಕೊಂಡು ಕುಸಿಯುವುದು ಸಹಜ ಶರೀರ ಧರ್ಮದ ಸ್ಥಿತಿಯನ್ನು ಅರಿಯದೆ ಅದನ್ನು ಮಡಿಯಾಗಿ ಕಂಡುದರಿಂದ ಉಂಟಾಗುವ ಪರಿತಾಪವಾಗುತ್ತದೆ ಎನ್ನುವುದನ್ನು ಲೇಖಕರು ವೈಜ್ಞಾನಿಕ ನಿಲುವಿನಲ್ಲಿ ಅಭಿವ್ಯಕ್ತಿಸುವ ಬಗೆ ಇಲ್ಲಿದೆ.

ಕಥೆಯಲ್ಲಿ ಸಂಕಪ್ಪಯ್ಯನ ಮಗ ನಾರಾಯಣ ತಾನು ಹೋಟೆಲಿಡಲಿಕ್ಕೆ ಅಪ್ಪ ದುಡ್ಡು ಕೊಡುವುದಿಲ್ಲವೆಂದಾಗ ಅದೇ ಪ್ರಕೃತಿ ಧರ್ಮವು ತನ್ನ ಪಾಲಿನ ಹಕ್ಕನ್ನು ಚಲಾಯಿಸುವ ಮಾತನ್ನಾಡಿ ತಂದೆಯ ಮಾನವನ್ನೇ ಬಯಲಿಗೆಳೆಯುವ ಅಥವಾ ಅಂಥ ಅಂಜಿಕೆ ಹುಟ್ಟಿಸುವ ನೀತಿಯನ್ನು ಅನುಸರಿಸುತ್ತದೆ. ಇದೂ ಕೂಡ ಶರೀರ (ಪ್ರಕೃತಿ) ಧರ್ಮದ ಸಹಜತೆಯೇ ಆಗಿದೆ. ಮಗಳನ್ನು ತನ್ನ ಮಗನಿಗೆ ಕೊಡಲಿಲ್ಲವೆಂಬ ಕಾರಣಕ್ಕೋ.. ಅಥವಾ ಸಂಕಪ್ಪಯ್ಯನ ಭೂಮಿಯ ಆಸೆಗೋ... ಶಾನುಭೋಗರು ಸಂಕಪ್ಪಯ್ಯನ ಮನೋಧೈರ್ಯವನ್ನು ಒಡೆಯುವುದು, ಸಂದರ್ಭ ಸಾಧಿಸಿ ಬೆನ್ನುಹತ್ತಿ ಅವನ ಮನೋಸ್ಥೈರ್ಯವನ್ನು ಕಳೆಯುವುದು, ಕುಟುಂಬದಲ್ಲಿ ವಿರಸ ಬಿತ್ತುವುದು, ಧನಿಕರಾದ ಕೃಷ್ಣಭಟ್ಟರು ಕನಿಷ್ಠ ಮಾನವೀಯತೆಯೂ ಇಲ್ಲದೆ ಕೇವಲ ವ್ಯವಹಾರಿಕರಾಗಿ ಸಂಕಪ್ಪಯ್ಯನ ಭೂಮಿಯನ್ನು ಕಬಳಿಸಿ ಕೊಳ್ಳುವುದು, ವ್ಯಾಪಾರಿ ಅಹಮ್ಮದ್ ಬ್ಯಾರಿಯು ಸಂಕಪ್ಪಯ್ಯನನ್ನು ಅವಮಾನಿಸುವುದು ಇತ್ಯಾದಿ ಘಟನೆಗಳು ಪ್ರಕೃತಿ ಧರ್ಮದ ಆಸೆ–ಆಕಾಂಕ್ಷೆಗಳ ಹಪಾಹಪಿತನದ ಅವಸ್ಥೆಗಳು ಎಷ್ಟು ಹರಿತವಾಗಿವೆ.. ಮೊನಚಾಗಿವೆ...! ಎಂಬುದನ್ನು ಸಂಕೇತಿಸುತ್ತವೆ.

ಒಟ್ಟಿನಲ್ಲಿ 'ಪ್ರಕೃತಿ' ಕಥೆಯು ಜೀವಸಂಕುಲಕ್ಕೆ ಆಧಾರವಾದ ಈ ನಿಸರ್ಗ ಪ್ರಕೃತಿಗೆ ತನ್ನದೇ ಆದ ಇತಿ–ಮಿತಿ–ಗತಿಗಳ ಸಂಚಲನವಿದೆ, ಹಾಗೆಯೇ ಇದರ ಮೇಲೆ ನೆಲೆನಿಂತ ಮನುಷ್ಯ ಮೊದಲಾಗಿ ಎಲ್ಲ ಜೀವಸಂಕುಲದ ದೇಹ (ಜೀವ) ಪ್ರಕೃತಿಗೂ ನಿರ್ದಿಷ್ಟ ಇತಿ–ಮಿತಿ–ಗತಿಗಳ ಸಂಚಲನವಿದೆ, ಹೀಗಿದ್ದರೂ ಮನುಷ್ಯ ಯಾಕೆ ಇದರ ಮರ್ಮ, ಅಂತರ್ಯಗಳನ್ನು ಅರಿಯಲಾರ..? ಎಂಬುದನ್ನು ಚಿಂತಿಸಲು ಹಚ್ಚುತ್ತದೆ. ನಿಸರ್ಗ ಪ್ರಕೃತಿಯ ವಿರುದ್ಧದ ಬಾಳು–ಬದುಕು ಅಸಾಧ್ಯ, ಅದು ಎಲ್ಲಿ ಹೇಗೆ ಅನುವು, ಅವಕಾಶ ನೀಡುತ್ತದೋ ಅಲ್ಲಿ ಈ ಜೀವ ಪ್ರಕೃತಿಯು ತನ್ನ ಇತಿ–ಮಿತಿಯೊಳಗೇ ಬದುಕನ್ನು ರೂಪಿಸಿಕೊಂಡು ಬಾಳಬೇಕು, ಶರೀರ ಧರ್ಮದ ಹಮ್ಮು– ಬಿಮ್ಮುಗಳು, ಸೃಷ್ಟಿಸಿಕೊಂಡ ಕಟ್ಟು–ಪಾಡುಗಳು ಅದರ ಮೇಲೆ ಮತ್ತು ತನ್ನ ಮೇಲೂ ಸವಾರಿ ಆಗದ ಹಾಗೆ ಮುಕ್ತ ಮನದಿಂದ ವಿನಯದಿಂದ, ಸಂಯಮದಿಂದ, ಅರಿವಿನಿಂದ, ಆಲೋಚನೆಯಿಂದ ನಡೆದರೆ ಬಾಳು ಹಗುರವಾದೀತು ! ಎಂಬ ಆಶಯವನ್ನು ಕಥೆ ತಿಳಿಯಾಗಿ ಹೇಳುತ್ತದೆ.

ಕಥೆಯ ಕೊನೆಯಲ್ಲಿ ತನ್ನ ಅಂಗಳದ ಸುಸ್ತಾಗಿ ಬಿದ್ದ ಸಂಕಪ್ಪಯ್ಯನ ಮುಖವನ್ನು ಮುದಿ ದನವೊಂದು ಬಂದು ಮೂಸುತ್ತಿರುವಾಗ ಅಂಥ ಸಂಕಟದಲ್ಲೂ ಸಂಕಪ್ಪಯ್ಯ ಅದರ ಕತ್ತನ್ನು ಸವರಿ ಜೀವ ಸಹಜ ಪ್ರೀತಿಯನ್ನು ತೋರುತ್ತಾನೆ. ಇದು ಮನುಷ್ಯ ಬದುಕುವುದಕ್ಕಾಗಿ ಹೋರಾಟ ಮಾಡುವುದು ಅನಿವಾರ್ಯ. ಪ್ರಕೃತಿ ಧರ್ಮ ಇರುವವರೆಗೆ ಜೀವ ಪ್ರೀತಿಯ ಸೆಲೆಯು ಕಷ್ಟನಷ್ಟಗಳನ್ನು ಅನುಭವಿಸುತ್ತಲೂ ಜೀವಂತವಾಗಿರಬೇಕು ಎಂಬುದನ್ನು ಅರಿವಾಗಿ ಮೂಡಿಸುತ್ತದೆ. ಇದನ್ನೇ ಕವಿ ಬೇಂದ್ರೆಯವರು ಸಾವಿಗಾಗಿ ತಪಿಸುವವರು ಬಾಳ ಬೀಜ ಹಿಡಿವರೆ..? ಎಂದು ಪ್ರಶ್ನಿಸುತ್ತಾರೆ.

**ಪರಾಮರ್ಶನ ಗ್ರಂಥಗಳು**


- ಅನಂತಮೂರ್ತಿ ಯು.ಆರ್. (2014). *ಪ್ರಜ್ಞೆ ಮತ್ತು ಪರಿಸರ.* ಅಂಕಿತ ಪುಸ್ತಕ.
- ಅನಂತಮೂರ್ತಿ ಯು.ಆರ್. (2011). *ಪೂರ್ವಾಪರ.* ವಸಂತ ಪ್ರಕಾಶನ.
- ಅನಂತಮೂರ್ತಿ ಯು.ಆರ್. (2007). *ಮಾತು ಸೋತ ಭಾರತ.* ಅಭಿನವ ಪ್ರಕಾಶನ.
- ಅನಂತಮೂರ್ತಿ ಯು.ಆರ್. (2007). *ಐದು ದಶಕಗಳ ಕಥೆಗಳು.* ಅಕ್ಷರ ಪ್ರಕಾಶನ.
- ಕೃಷ್ಣಮೂರ್ತಿ ಹನೂರು ಮತ್ತು ಬಾನು ಮುಸ್ತಾಕ್. (ಸಂ.). (2006). *ಸುವರ್ಣ ಕಥಾ ಸಂಕಲನ.*